**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**
**ನ್ಯಾಯಾಲಯ, ಹೊಳೆನರಸೀಪುರ**

ಫ್ರಾಸ –3

**CC No**: 41/2020 ಚಾಸ– 3

| | |
|---|---|
| ಹೆಸರು | **ಚಿಕ್ಕಯ್ಯ ಡಿ ಸಿ** |
| ತಂದೆಯ ಹೆಸರು | **ಚಿಕ್ಕಯ್ಯ** |
| ವಯಸ್ಸು | **37 ವರ್ಷ** |
| ಉದ್ಯೋಗ | ಖಾಸಗಿ ನೌಕರಿ |
| ವಾಸಸ್ಥಳ | ಬೆಂಗಳೂರು |

ದಿನಾಂಕಃ 17.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ–**

ಚಾಸಾ 1 ಮತ್ತು 2 ರವರ ಪರಿಚಯ ಇದೆ. ನನ್ನ ಸ್ವಂತ ಊರು ದೇವರಮುದ್ದನಹಳ್ಳಿ . ಚಾಸಾ 1 ರವರ ಮನೆಯ ಕೊಟ್ಟಿಗೆಯಿಂದ ಕುರಿಗಳು ಕಳ್ಳತವಾಗಿದ್ದವು. ಆ ಸಂಬಂಧ ಚಾಸಾ 14 ಪರಿಶೀಲನೆ ಮಾಡಲು ದೇವರ ಮುದ್ದನಹಳ್ಳಿ ಗ್ರಾಮಕ್ಕೆ ದಿಃ 02.07.2019 ರಂದು ಬಂದಿದ್ದರು. ಕುರಿ ಕಳ್ಳತನವಾದ ಜಾಗವನ್ನು ಚಾಸಾ 1 ರವರು ಪೊಲೀಸರಿಗೆ ತೋರಿಸಿದರು. ಆ ಸಮಯಕ್ಕೆ ನಾನು ಮತ್ತು ಚಾಸಾ 2 ಇದ್ದೆವು. ಪೊಲೀಸರು ಜಾಗವನ್ನು ಪರಿಶೀಲನೆ ಮಾಡಿ ಲ್ಯಾಪ್ಟಾಪ್ ಅಲ್ಲಿ ಟೈಪ್ ಮಾಡಿಕೊಂಡು ನಮ್ಮ ಸಹಿ ಪಡೆದಿರುತ್ತಾರೆ. ಪೊಲೀಸರು ಬೆಳಗ್ಗೆ 11–30 ಗಂಟೆಯಿಂದ 12–30 ಗಂಟೆಯ ವರೆಗೆ ಮಹಜರ್ ಮಾಡಿರುತ್ತಾರೆ ಮತ್ತು ಪೋಟೋ ತೆಗೆದಿರುತ್ತಾರೆ. ಸಾಕ್ಷಿ ನಿಪಿ 2

ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 2 (ಸಿ) ಎಂದು ಗುರುತಿಸಲಾಯಿತು. ಪೋಟೋದ ಜೆರಾಕ್ಸ್ ಪ್ರತಿ ಇದ್ದುದರಿಂದ ಅದನ್ನು ನಿಶಾನೆ ಗೊಳಿಸಿರುವುದಿಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ದಿಃ 02.07.2019 ರಂದು ಪೊಲೀಸರು ಕುರಿ ಕಳ್ಳತನದ ವಿಚಾರವಾಗಿ ದೇವಮುದ್ದನಹಳ್ಳಿ ಗ್ರಾಮಕ್ಕೆ ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಳ್ಳತನವಾದ ಜಾಗವನ್ನು ಚಾಸಾ 1 ರವರು ಪೊಲೀಸರಿಗೆ ತೋರಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ 2 ರವರು ಸ್ಥಳದಲ್ಲಿ ಹಾಜರಿದ್ದು ನಮ್ಮ ಸಮಕ್ಷಮ ಮಹಜರ್ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರ್ ಮಾಡದೇ ಇದ್ದರು ಸಹ ಪೊಲೀಸರು ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.